ದಿನಾಂಕ 17.04.2025 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

1 ರಿಂದ 4ನೇ ಪ್ರತಿವಾದಿ ಪರ ವಕೀಲರು ಸಿವಿಲ್ ಜಡ್ಜ್ ನ್ಯಾಯಾಲಯ ಮೂಡಬಿದ್ರೆಯಲ್ಲಿ ಈ ಹಿಂದೆ ಮಾಡಿದ ಪಾಟೀ ಸವಾಲನ್ನು ಅಳವಡಿಸಿಕೊಂಡು ಮುಂದಿನ ಪಾಟೀ ಸವಾಲು ಮಾಡಲು ಕೋರಿಕೊಂಡಿದ್ದು, ಅನುಮತಿಸಲಾಯಿತು.

**ಪಾಟೀ ಸವಾಲು 1 ರಿಂದ 4ನೇ ಪ್ರತಿವಾದಿ ಪರ ವಕೀಲರಾದ ಶ್ರೀ.ಎಸ್.ಪಿ.ಹೆಚ್. ರವರಿಂದಃ**

ನಾರ್ನ ಮೊಯ್ಲಿರವರು ನಮ್ಮ ಕುಟುಂಬದ ಹಿರಿಯರೆಂದರೆ ಸರಿ. ನಾರ್ನ ಮೊಯ್ಲಿರವರ ಮಗಳ ಮಗ ಜಾಣಪ್ಪ ದೇವಾಡಿಗ. ಜಾಣಪ್ಪ ದೇವಾಡಿಗರವರು ಭೂ ನ್ಯಾಯ ಮಂಡಳಿಗೆ ನೀಡಿದ ಅರ್ಜಿಯನ್ನು ನೋಡಿ ತಿಳಿದುಕೊಂಡಿದ್ದೇನೆ. ಸಾಕ್ಷಿಗೆ ಫಾರಂ ನಂಬರ್ 7ನ್ನು ತೋರಿಸಿದಾಗ ಸಾಕ್ಷಿ ಅದನ್ನು ನೋಡಿ ಅದು ಜಾಣಪ್ಪ ದೇವಾಡಿಗ ಮತ್ತು ಬಾಡು ಮೊಯ್ಲಿ ರವರು ಜಂಟಿಯಾಗಿ ನೀಡಿದ ಅರ್ಜಿ ಎಂದು ಒಪ್ಪಿಕೊಂಡ ಮೇರೆಗೆ ನಿಡಿ1 ಎಂದು ಗುರುತಿಸಲಾಯಿತು. ನಿಡಿ1ರಲ್ಲಿ ಕಾಣಿಸಿದ ಆಸ್ತಿ ಹಿರಿಯರ ಆಸ್ತಿ ಎಂದರೆ ಸಾಕ್ಷಿ ಅಲ್ಲ, ಅದು ಅರ್ಜಿದಾರರದ್ದೇ ಸ್ವಂತ ಆಸ್ತಿ ಆಗಿರುತ್ತದೆ ಎಂದು ಹೇಳುತ್ತಾರೆ. ನನ್ನ ತಂದೆ – ಜಾಣಪ್ಪ ದೇವಾಡಿಗರು ನಿಡಿ1ರಲ್ಲಿ ನಮೂದಿಸಿದ ವಿಷಯ ಸತ್ಯ. ನಾರ್ನ ದೇವಾಡಿಗರವರ ಮಗ ಬಾಡು ದೇವಾಡಿಗ ಎಂದರೆ ಸರಿ. ಅವರೆಲ್ಲರೂ ಒಂದೇ ಮನೆಯಲ್ಲಿ ವಾಸವಿದ್ದರು ಎಂದರೆ ಸರಿ. ಮನೆ ಯಜಮಾನ ನಾರ್ನ ದೇವಾಡಿಗ ಎಂದರೆ ಸರಿ.

ನಾರ್ನ ದೇವಾಡಿಗರವರಿಗೆ ನಾಲ್ಕು ಜನ ಮಕ್ಕಳು ಎಂದರೆ ನನಗೆ ಗೊತ್ತಿಲ್ಲ. ನಾಗೇಶ್ ದೇವಾಡಿಗ –7ನೇ ಪ್ರತಿವಾದಿ ನನ್ನ ತಮ್ಮ. ಸಾಕ್ಷಿಗೆ ಒಂದು ದಾಖಲೆಯನ್ನು ತೋರಿಸಿ ಇದು ನಾಗೇಶ್ ದೇವಾಡಿಗರವರು ಭೂ ನ್ಯಾಯ ಮಂಡಳಿಗೆ ಸಲ್ಲಿಸಿದ ಅರ್ಜಿ

ಎಂದರೆ ಸಾಕ್ಷಿ ಅದನ್ನು ನೋಡಿ ಒಪ್ಪುತ್ತಾರೆ. ದಾಖಲೆಯನ್ನು ನಿಡಿ2 ಎಂದು ಗುರುತಿಸಲಾಯಿತು. ನನಗೆ ದಾವಾ ಆಸ್ತಿಯ ಬಗ್ಗೆ ನಾನು ಹುಟ್ಟಿದ ನಂತರದ ಮಾಹಿತಿ ಮಾತ್ರ ಇದೆ, ಅದಕ್ಕೂ ಪೂರ್ವದ್ದು ಇಲ್ಲ ಎಂದರೆ ಸಾಕ್ಷಿ ಹೌದು ಎಂದು ಹೇಳುತ್ತಾರೆ. ಸಾಕ್ಷಿಗೆ ಒಂದು ಫೋಟೋವನ್ನು ತೋರಿಸಲಾಗಿ ಇದು ನಾರ್ನ ದೇವಾಡಿಗರವರು ವಾಸವಿರುವ ಮನೆ ಎಂದು ತೋರಿಸಿದಾಗ ಸಾಕ್ಷಿ ಒಪ್ಪವುದಿಲ್ಲ, ಮುಂದುವರೆದು ಅದು ನನ್ನ ತಂದೆ ಕಟ್ಟಿಸಿದ ಮನೆ ಎಂದು ಹೇಳುತ್ತಾರೆ. ಸದರಿ ಫೋಟೋವನ್ನು ತೋರಿಸಿ ಇದರಲ್ಲಿ ಎರಡು ಮನೆ ಇದೆ ಎಂದು ಹೇಳಿದಾಗ ಸಾಕ್ಷಿ ಒಪ್ಪವುದಿಲ್ಲ, ಒಂದು ಮನೆ ಒಂದು ಹಟ್ಟಿ ಇದೆ ಎಂದು ಹೇಳುತ್ತಾರೆ. ಅದರಲ್ಲಿರುವ ಒಂದು ಮನೆಯಲ್ಲಿ ಬಾಡು ಮೊಯ್ಲಿ ಮತ್ತು ಜಾಣಪ್ಪ ದೇವಾಡಿಗರವರು ವಾಸವಿದ್ದರು ಎಂದು ಹೇಳುತ್ತಾರೆ. ಫೋಟೋವನ್ನು ನಿಡಿ3 ಎಂದು ಹೇಳುತ್ತಾರೆ. ಅದೇ ಮನೆಯಲ್ಲಿ ಕೊರಪಳು ವಾಸವಿದ್ದರು ಎಂದರೆ ಸರಿಯಲ್ಲ. ಮಹಾಬಲ ವಾಸವಿದ್ದರು ಎಂದರೆ ಸರಿಯಲ್ಲ. ಮಹಾಬಲ ಕೊರಪಳುವಿನ ಮಗ ಎಂದರೆ ಸರಿ. ಮಹಾಬಲ ನನಗೆ ಚಿಕ್ಕಪ್ಪ. ಮಹಾಬಲ ನಮ್ಮ ಕುಟುಂಬದ ದೈವ ದೇವರ ಕೆಲಸ ಮಾಡುತಿದ್ದರು ಎಂದರೆ ಸರಿಯಲ್ಲ. ನಾನು ಒಂದೇ ಮನೆಯಲ್ಲಿ ವಾಸವಿದ್ದೆವು ಎಂದು ಸುಳ್ಳು ಹೇಳುತಿದ್ದೇನೆ ಎಂದರೆ ಸರಿಯಲ್ಲ, ನಾವು ಹಟ್ಟಿಯಲ್ಲಿ ವಾಸವಿದ್ದೆವು ಎಂದರೆ ಸರಿಯಲ್ಲ.

ನಾಗೇಶ ಭೂ ನ್ಯಾಯ ಮಂಡಳಿಗೆ ಯಾಕೆ ಅರ್ಜಿ ಕೊಟ್ಟಿದ್ದಾರೆ ಎಂದು ನನಗೆ ತಿಳಿದಿದೆ ಎಂದರೆ ಹೌದು. ಮಹಾಬಲನ ಅಣ್ಣ ಶೇಖರ ಎಂದರೆ ಸರಿ. ಗುಲಾಬಿ, ದೇವಕಿ, ಸುಂದರ ಮತ್ತು ಶಾಂತಪ್ಪರವರು ಮಹಾಬಲರವರ ಒಡಹುಟ್ಟಿದವರು ಎಂದರೆ ಸರಿ. ಅವರೆಲ್ಲರೂ ನಾಗಪ್ಪರವರ ಜೊತೆಯಲ್ಲಿದ್ದರು ಎಂದರೆ ಸರಿಯಲ್ಲ. ಅವರು ನಾರಾವಿಯಲ್ಲಿ ವಾಸ್ತವ್ಯ ಇದ್ದರು.

ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಿದ್ದು ನೀಡಲಾಯಿತು.

ನ್ಯಾಯಾಲಯದ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓದಿ ಹೇಳಿ ಕೇಳಿ ಸರಿ ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ.,ಮೂಡಬಿದ್ರೆ